**CC 2499/2022**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**<u>ಸಿಸಿ ನಂಬರ್ 2499/2022</u>**

**ಸಿ ಡಬ್ಲ್ಯೂ -5**

**ಪಿ ಡಬ್ಲ್ಯೂ -4**

| | |
|---|---|
| **ಸಾಕ್ಷಿಯ ಹೆಸರು -** | **ಹನುಮಂತ** |
| **ತಂದೆಯ ಹೆಸರು -** | **ಕಾಳಪ್ಪ** |
| **ವಯಸ್ಸು -** | **32 ವರ್ಷಗಳು** |
| **ಉದ್ಯೋಗ -** | **ಬೇಕರಿ ಕೆಲಸ** |
| **ವಾಸಸ್ಥಳ -** | **ಒಳಗುಂದಿ** |

**<u>ಸಾಕ್ಷಿಯನ್ನು ದಿನಾಂಕಃ 27-11-2025 ರಂದು ಪ್ರಾಮಾಣೀಕರಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ</u>**

ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**<u>ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ</u>**

ದಿಃ 02-09-2022 ರಂದು ಚಾಸಾ -4 ರವರು ತಮ್ಮ ಮಗಳ ಸೀಮಂತ ಕಾರ್ಯಕ್ರಮಕ್ಕೆ ಊರಿಗೆ ಹೋಗಿದ್ದರು ಅಂದರೆ ಸರಿ .

ದಿಃ 10-09-2022 ರಂದು ಸಂಜೆ 7.00 ಗಂಟೆಗೆ ಕೆಲಸದಿಂದ ಬಂದು, ಮರುದಿನ ಬೆಳಿಗ್ಗೆ 4.300 ಗಂಟೆಗೆ ಯಾರೋ ಬಾಗಿಲು ಬಡಿದಂತೆ ಶಬ್ಧ ಆಗಿದ್ದರಿಂದ ಕೆಳಗೆ ಬಂದು ನೋಡಿದಾಗ ಚಾಸಾ -6 ರವರು ಸಹ ನನ್ನ ಮನೆಯ

ಹತ್ತಿರ ಬಂದಿದ್ದು ಕಂಡಿತು ಅಂದರೆ ಸರಿಯಲ್ಲ. ನಾವಿಬ್ಬರು ಚಾಸಾ -4 ರವರ ಮನೆಯ ಹತ್ತಿರ ಹೋದಾಗ ಅವರ ಮನೆಗೆ ಹಾಕಿದ್ದ ಗೇಟಿನ ಬೀಗ ಮತ್ತು ಕಿಟಕಿಯ ಮೆಶ್ ಮುರಿದಿದ್ದು ಕಾಣಿಸಿತು ಅಂದರೆ ಸರಿಯಲ್ಲ. ಅವರ ಮನೆಯಿಂದಯಾರೋ ಒಳಗೆ ಇರುವಂತೆ ಶಬ್ದ ಬರುತ್ತಿತ್ತು ಅಂದರೆ ಸರಿಯಲ್ಲ. ಪೋಲಿಸರು ಸ್ಥಳಕ್ಕೆ ಬಂದಾಗ ಕಿಟಕಿಯ ಮೂಲಕ ಒಬ್ಬ ವ್ಯಕ್ತಿ ಬಂದ ಅಂದರೆ ಸರಿಯಲ್ಲ. ಆತನನ್ನು ನೋಡಿದಾಗ ಆತ ನಮ್ಮ ಒಣಿಯ ರಮೇಶ ಅಲಿಯಾಸ್ ಪರಶುರಾಮ ಅಲಿಯಾಸ್ ಹೆಗ್ಗಣ ಆಗಿದ್ದನು ಅಂದರೆ ಸರಿಯಲ್ಲ. ನಾನು ಚಾಸಾ - 4 ರವರಿಗೆ ಸದರಿ ವಿಚಾರ ಕರೆ ಮಾಡಿ ತಿಳಿಸಿದ್ದೆ ಅಂದರೆ ಸರಿಯಲ್ಲ. ಆರೋಪಿಯನ್ನು ಪೋಲಿಸರು ಹಿಡಿದುಕೊಂಡು ಹೋಗಿದ್ದರು ಅಂದರೆ ಸರಿಯಲ್ಲ. ನಂತರ ಚಾಸಾ -1 ರವರು ದೂರು ನೀಡಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ಈ ಬಗೆಗ ದಿಃ 11-09-2022 ರಂದು ಹೇಳಿಕೆ ನೀಡಿರುತ್ತೇನೆ ಅಂದರೆ ಸರಿಯಲ್ಲ. ಸಾಕ್ಷಿ ನೀಡಿಲ್ಲ ಎಂಬ ಹೇಳಿಕೆಯನ್ನು ನಿಪಿಃ 4 ಎಂದು ಗುರುತಿಸಲಾಯಿತು. ನಿಪಿಃ 4 ರಂತೆ ಹೇಳಿಕೆ ನೀಡಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ಶ್ರೀ ಬಿ.ಸಿ.ಎಂ ವಕೀಲರಿಂದಃ** ಇಲ್ಲಾ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.